

ವಸ್ತುಸಂಗ್ರಹಾಲಯವನ್ನು ಉದ್ಘಾಟಿಸಿದ ಜಿಲ್ಲಾಧಿಕಾರಿ ಎಸ್.ಎಸ್.ನಕುಲ್ ಅವರಿಗೆ ಇತಿಹಾಸ ತಜ್ಞ ಪ್ರೊ.ರವಿಕೋರಿ ಶೆಟ್ಟರ್ ಮಾಹಿತಿ ನೀಡಿದರು

# ರಾಬರ್ಟ್ ಬ್ರೂಸ್‌ಫೂಟ್ ಸಂಗ್ರಹಾಲಯ ಲೋಕಾರ್ಪಣೆ

ಬಳ್ಳಾರಿ: 'ರಾಬರ್ಟ್ ಬ್ರೂಸ್‌ಫೂಟ್ ಸಂಗನಕಲ್ಲು ಪ್ರಾಚ್ಯವಸ್ತು ಸಂಗ್ರಹಾಲಯ'ವನ್ನು ಜಿಲ್ಲಾಧಿಕಾರಿ ಎಸ್.ಎಸ್. ನಕುಲ್ ನಗರದಲ್ಲಿ ಬುಧವಾರ ಲೋಪಾರ್ಪಣೆಗೊಳಿಸಿದರು.

'ನಗರದ ಸಾಂಸ್ಕೃತಿಕ ಸಮುಚ್ಚಯದಲ್ಲಿರುವ ವಸ್ತುಸಂಗ್ರಹಾಲಯದಲ್ಲಿ ಪ್ರಾಗೈತಿಹಾಸಿಕ ಕಾಲದ ಮಾನವನ ನೆಲೆಯಾಗಿದ್ದ ಸಂಗನಕಲ್ಲು ಬೆಟ್ಟಗಳಲ್ಲಿ ದೊರೆತ ಹಲವು ವಸ್ತುಗಳನ್ನು ಒಪ್ಪವಾಗಿ ಜೋಡಿಸಿಡಲಾಗಿದೆ. ಶಿಲಾ ಉಪಕರಣಗಳು, ಮಡಕೆಗಳು ಸೇರಿದಂತೆ ಉತ್ಖನನದ ವೇಳೆ ದೊರೆತ ವಸ್ತುಗಳು ಕುತೂಹಲ ಮೂಡಿಸುತ್ತವೆ. ನಗರದ ಸಾರ್ವಜನಿಕರು ಸಂಗ್ರಹಾಲಯಕ್ಕೆ ಭೇಟಿ ನೀಡಬೇಕು' ಎಂದು ಜಿಲ್ಲಾಧಿಕಾರಿ ಮನವಿ ಮಾಡಿದರು.

'ಸಂಗ್ರಹಾಲಯದ ಕೆಳಮಹಡಿಯಲ್ಲಿ ಮಾನವನ ಜೈವಿಕ, ಸಾಂಸ್ಕೃತಿಕ ವಿಕಸನ ಹಾಗೂ ಆದಿಮಾನವ ಮೂಲ ನೆಲೆಯಾದ ಆಫ್ರಿಕಾದಿಂದ ಜಗತ್ತಿನ ಇತರ ಭೂ ಭಾಗಕ್ಕೆ ವಲಸೆ ಹೋದದ್ದರ ಕುರುಹುಗಳನ್ನು ಸಂಗ್ರಹಿಡಿಸಲಾಗಿದೆ. ಉತ್ತರ ಕರ್ನಾಟಕ ಹಾಗೂ ಆಂಧ್ರದ ರಾಯಲಸೀಮಾ ಭಾಗದಲ್ಲಿ ದೊರೆತಿರುವ ಪ್ರಾಗೈತಿಕಹಾಸದ ವಸ್ತುಗಳು ಕೂಡ ಇಲ್ಲಿವೆ' ಎಂದರು.

**ಬ್ರೂಸ್‌ಫೂಟ್ ಹೆಸರು:** ದೇಶದಲ್ಲಿ ಆದಿ ಮಾನವನ ನೆಲೆಗಳನ್ನು ಗುರುತಿಸಿದ ಮೊದಲ ವ್ಯಕ್ತಿ ರಾಬರ್ಟ್ ಬ್ರೂಸ್‌ಫೂಟ್. ಸಂಗನಕಲ್ಲು ನವಶಿಲಾಯುಗದ ಕುರಿತು ಅಧ್ಯಯನ ಮಾಡಿದ, ಬಳ್ಳಾರಿ, ಚಿತ್ರದುರ್ಗ ಭಾಗದಲ್ಲಿ ಪೂರ್ವ ಶಿಲಾಯುಗದ ಸ್ಥಳಗಳನ್ನು ಗುರುತಿಸಿದ, ಹಸುವಿನ ಸಗಣಿಯ ರಾಶಿಯಿಂದ ಸುಟ್ಟು ನಿರ್ಮಿಸಲಾಗಿರುವ ಬೂದಿ ದಿಬ್ಬಗಳು ನವಶಿಲಾಯುಗದ ಸಂಸ್ಕೃತಿಯ ಪ್ರತೀಕವಾಗಿವೆ ಎಂದು ಪ್ರತಿಪಾದಿಸಿದ ಮೊದಲ ವ್ಯಕ್ತಿಯೂ ಅವರೇ. ಆ ಹಿನ್ನೆಲೆಯಲ್ಲಿ ಸಂಗ್ರಹಾಲಯಕ್ಕೆ ಅವರ ಹೆಸರನ್ನೇ ಇಡಲಾಗಿದೆ. ರವಿ ಕೋರಿ ಶೆಟ್ಟರ್, ಸಂತೋಷ್ ಮಾರ್ಟಿನ್ ಇದ್ದರು.